ಶ್ರೀ ಎನ್. ಎಂ. ಅಡ್ಯಂತಾಯ.—ಅವರು ಹೊಸಬರಲ್ಲ.

ಅಧ್ಯಕ್ಷರು.—ನೀವು ಕಲಿಯುಬೇಕು ನಾವು ಕಲಿಯಬೇಕು. ಕಲಿಯುವುದು ಬಹಳ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಪ್ರಿವಿಲೇಜ್ ಇಷ್ಯೂ ಮೇಲೆ ಕಂಟೆವರ್ಟ್ ಆಫ್ ದಿ ಹೌಸ್.....

ಅಧ್ಯಕ್ಷರು.—ಒಂದುಕಡೆಯಿಂದ ಹೋಗೋಣ. ಇವತ್ತೇ ತೆಗೆದುಕೊಳ್ಳೋಣ.....ಈಗ ಒಂದು ಪ್ರಕಟಣೆಯನ್ನು ಮಾಡುತ್ತೇನೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವತ್ತು ತೆಗೆದುಕೊಳ್ಳುತ್ತೇನೆಂದು ತಾವು ಹೇಳಿದ್ದೀರಿ.

ಅಧ್ಯಕ್ಷರು.—ಟೈಂ ಇದ್ದರೆ ನೋಡೋಣ ಈಗ ಒಂದುಕಡೆಯಿಂದ ಹೋಗೋಣ ನೀವೆಲ್ಲಾ ಬಂದು ಗಲಾಟೆ ಮಾಡುವುದು ಬೇಡ. ಆ ಪದ್ಧತಿ ಸರಿಯಲ್ಲ ನಿಮಗೆ ನಾನು ಏನು ಹೇಳುತ್ತಿದ್ದೇನೆಂದರೆ you should not take law into your own hands. Might is right ಅಂತ ಹೋಗಬಾರದು ನಿಮಗೆ ಸಾಕಷ್ಟು ಅವಕಾಶವನ್ನು ನಾನು ಕೊಡುತ್ತೇನೆ ಅಲ್ಲಿ ತಾವು ಕೂತು ಎಷ್ಟು ಹೊತ್ತು ಬೇಕಾದರೂ ಮಾತನಾಡಿ ಆದರೆ ಇಲ್ಲಿ ಅಧ್ಯಕ್ಷರ ಪೀಠದ ಹತ್ತಿರ ಬಂದು ಗಲಾಟೆ ಮಾಡುವುದು ಬೇಡ, ಆ ಪದ್ಧತಿ ಸರಿಯಲ್ಲ ನೀವು ಅಲ್ಲಿ ಬರುವುದು, ಇಲ್ಲಿ ಬರುವುದು ಅಂದರೆ ಏನು ಅದರ ಅರ್ಥ ? ಶ್ರೀಮತಿ ನಾಗರತ್ನಮ್ಮನವರು ಇಲ್ಲಿ ೬ ವರ್ಷ ಇದ್ದರು ನಾನೂ ಎಂ.ಎಲ್.ಎ. ಆಗಿ ನೋಡಿದ್ದೇನೆ. ಅವರು ಸಭೆಯನ್ನು ಚೆನ್ನಾಗಿ ನಡೆಸುತ್ತಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಲ್ಲಿ ಬಂದು ಯಾರು ಮೈಕ್ ಕಿತ್ತು ಬಿಸಾಕಿದರೊ ಅವರಿಗೆ ಹೇಳಿ.....

(ಗೊಂದಲ)

ಅಧ್ಯಕ್ಷರು.—ಅವರು ಇಲ್ಲಿ ಇದ್ದಾಗ ತಪ್ಪು ಮಾತಾಡಿರಬಹುದು, ಸಾಗರ್‌ರವರು ಮಾಡಿದ್ದಾರೆ, ಬೊಮ್ಮಾಯಿಯವರು ಮಾಡಿದ್ದಾರೆ ಎಂದು ತಾವೂ ಸಹ ಅದೇ ರೀತಿ ತಪ್ಪು ಮಾಡಲಿಕ್ಕೆ ಹೋಗಬಾರದು. ಈಗ ಪ್ರಕಟಣೆಯನ್ನು ಹೇಳುತ್ತೇನೆ.

(ಗೊಂದಲ)

ಪ್ರಕಟಣೆ—೧

ಅಧ್ಯಕ್ಷರು.—ಪ್ರಕಟಣೆ—೧, ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ ೧೧೪ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕರಿಸಲಾದ ಈ ಕೆಳಕಂಡ ವಿಧೇಯಕಗಳನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ೧೩-೧೧-೧೯೮೮ರಂದು ಅನುಮೋದಿಸಲಾಯಿತು ಎಂದು ತಿಳಿಸುತ್ತೇನೆ.

ಅ) ೧೯೮೮ನೇ ಇಸವಿಯ ಭೂಸ್ವಾಧೀನ (ಕರ್ನಾಟಕ ತಿದ್ದುಪಡಿ)

ಆ) ೧೯೮೮ನೇ ಇಸವಿಯ ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಶಾಸನ (ತಿದ್ದುಪಡಿ) ವಿಧೇಯಕ

ಇ) ೧೯೮೮ನೇ ಇಸವಿಯ ಕರ್ನಾಟಕ ಕುಷ್ಠ ರೋಗ ಶಾಸನಗಳ (ನಿರಸನ) ವಿಧೇಯಕ

ಈ) ೧೯೮೮ನೇ ಇಸವಿಯ ಕರ್ನಾಟಕ ನ್ಯಾಯಾಲಯ ಶುಲ್ಕ ಹಾಗೂ ದಾವೆಗಳ ಮೌಲ್ಯ ಮಾಪನ (ತಿದ್ದುಪಡಿ) ವಿಧೇಯಕ."

ಪ್ರಕಟಣೆ—೨

ಅಧ್ಯಕ್ಷರು.—ಪ್ರಕಟಣೆ—೨, ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ ೯೯ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ ೧೩–೧೦–೧೯೮೮ ರಂದು ತಿದ್ದುಪಡಿಗಳಿಲ್ಲದೆ ಅಂಗೀಕಾರವಾದ ಈ ಕೆಳಕಂಡ ವಿಧೇಯಕವನ್ನು ವಿಧಾನ ಸಭೆಯು ಆನುಮೋದನೆಗಾಗಿ ಕಳುಹಿಸುತ್ತಿದ್ದೇನೆ.

೧೯೮೮ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ಎರಡನೇ ತಿದ್ದುಪಡಿ) ವಿಧೇಯಕ."

ಬೆಂಗಳೂರು ಅರಮನೆಯ ಆವರಣದಲ್ಲಿ ಜರುಗಿದ ಜನತಾ ಮೇಳಕ್ಕೆ ಸರ್ಕಾರಿ ಯಂತ್ರದ ದುರುಪಯೋಗ ಮತ್ತು ಜನತಾ ದಳದ ಉದಯಂದಿಂದ ಸರ್ಕಾರದ ಮೇಲೆ ಉಂಟಾಗಿರುವ ಪರಿಣಾಮದ ಬಗ್ಗೆ ನಿಯಮ ೬೮ರ ಮೇರೆಗೆ ಚರ್ಚೆ

ಅಧ್ಯಕ್ಷರು.—ಈಗ ಶ್ರೀಮತಿ ನಾಗರತ್ನಮ್ಮನವರು ೬೮ನೇ ನಿಯಮದ ಪ್ರಕಾರ ಅವಕಾಶ ಮಾಡಿಕೊಟ್ಟಿರುವ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಬೇಕು.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ನಾನು ಒಂದು ನೋಟೀಸ್ ಕೊಟ್ಟಿದ್ದೆ.

(ಗೊಂದಲ)

ಅಧ್ಯಕ್ಷರು.—ಈಪತ್ತಿ ೮ ಗಮನ ಸೆಳೆಯುವ ಸೂಚನೆ ಇದೆ, ಆನಂತರ ೫೩ ನಿಯಮದ ಪ್ರಕಾರ ೩೩೪ರ ಪ್ರಕಾರ ವಿಷಯಗಳು ಇದೆ, ಇವೊತ್ತು ಏನೇನು ಆಜೆಂಡಾ ಪ್ರಕಾರ ಇದೆ, ಅದರಂತೆ ಹೋಗೋಣ ಇವೊತ್ತು ರಾತ್ರಿ ೧೨ ಗಂಟೆ ಅಲ್ಲ, ೧೩ ಗಂಟೆ ಆದರೂ ಸಭೆ ನಡೆಸೋಣ.

ಶ್ರೀ ಯು. ಭೂಪತಿ.—೧೩ ಗಂಟೆ ಇಲ್ಲ.....

(ಗೊಂದಲ)

ಅಧ್ಯಕ್ಷರು.—ಇವೊತ್ತು ವಿಷಯಗಳು ಬಹಳ ಇವೆ. ಈ ವಿಷಯವನ್ನು ಒಂದು ಗಂಟೆಯಲ್ಲಿ ಮುಗಿಸೋಣ.

(ಗೊಂದಲ)

ಶ್ರೀ ಡಿ. ಜಿ. ಬಸವನಗೌಡ.—ಅಧ್ಯಕ್ಷರೇ, ೧೨ ಗಂಟೆ ಅಲ್ಲ, ೧ ಗಂಟೆ ಆಗಲಿ, ಕುಳಿತುಕೊಳ್ಳಿ. ನೀವೆ ತಾವು ಸಭಾಧ್ಯಕ್ಷರಾದ ಮೇಲೆ ಊಟ ಕೊಟ್ಟಿಲ್ಲ, ಆದ್ದರಿಂದ ರಾತ್ರಿ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ನಿಯಮಗಳ ಪ್ರಕಾರ ಯಾರು ಯಾರು ಎದ್ದು ನಿಲ್ಲುತ್ತಾರೆ, ಅವರೆಲ್ಲರನ್ನೂ ನಾನು ಕರೆಯುತ್ತೇನೆ, ನಿಯಮ ಬಿಟ್ಟರೆ ನಾನು ಯಾರನ್ನೂ ಕೂಡ ಕರೆಯುವುದಿಲ್ಲ. ಈಗ ಶ್ರೀಮತಿ ನಾಗರತ್ನಮ್ಮನವರು ಮಾತನಾಡುತ್ತಾರೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ಸುಮಾರು ೧೦–೧೨ ಜನರು ರುಜು ಮಾಡಿ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೇವೆ. ಅಡ್ಜರ್ನ್‌ಮೆಂಟ್ ಮೋಷನ್ ಅಂದರೆ ಎಲ್ಲಾ